# ಕೌಶಲಾಭಿವೃದ್ಧಿ ಕಾರ್ಯಾಗಾರ ಯಶಸ್ವಿ



**ಹಳಿಯಾಳ:** ಕೆಎಲ್‌ಎಸ್‌ವಿಡಿಐಟಿ ಹಳಿಯಾಳದಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಹಾಗೂ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳ ಕೌಶಲ ಅಭಿವೃದ್ಧಿಗೆ ಕಾರ್ಯಗಾರ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕಿಯಾಗಿ ಹುಬ್ಬಳ್ಳಿಯ ವಿಜಯಲಕ್ಷ್ಮೀ ಗೇರ್ಸ್ ಸಂಸ್ಥೆಯ ಸತೀಶ್ ನಾಡಿಗೇರ್ ಆಗಮಿಸಿ ಮಾತನಾಡಿದರು.

ಕೈಗಾರಿಕಾ ಕ್ಷೇತ್ರವು ಬಯಸುವ ಕೌಶಲ್ಯಗಳನ್ನು ವಿದ್ಯಾರ್ಥಿಗಳು ಹೊಂದುವುದು ಅನಿವಾರ್ಯವಾಗಿದ್ದು, ತಮ್ಮ ಸಂಸ್ಥೆಯು ವಿದ್ಯಾರ್ಥಿಗಳ ಕೌಶಲಾಭಿವೃದ್ಧಿಗೆ ವೇದಿಕೆ ಕಲ್ಪಿಸಿಕೊಡುತ್ತಿದೆ ಎಂದು ಹೇಳಿದರು.

ಸಿಎನ್‌ಸಿ ಮಶೀನ್ ಕಾರ್ಯ ವೈಖರಿ ಹಾಗೂ ಬಳಸುವ ಕೌಶಲದ ಕುರಿತು ವಿದ್ಯಾರ್ಥಿಗಳಿಗೆ ವಿವರಿಸಿದರು. ವಿಜಯಲಕ್ಷ್ಮೀ ಗೇರ್ಸ್ ನ ಅಜಿತ್ ದಾನಿ ಮತ್ತು ಎಸ್.ಬಿ ಚೌಹಾಣ್ ಜನರೇಟರ್, ಮೋಟರ್ ವೈಂಡಿಂಗ್ ಹಾಗೂ ರಿವೈಂಡಿಂಗ್ ಕುರಿತು ಮಾಹಿತಿ ನೀಡಿದರು. ಜನರೇಟರ್ ನಲ್ಲಿನ ಲೋಪದೋಷಗಳನ್ನು ಪತ್ತೆ ಮಾಡುವ ಪರೀಕ್ಷೆಗಳನ್ನು ಪ್ರಾಯೋಗಿಕವಾಗಿ ತೋರಿಸಿದರು.

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಪ್ರೊ. ಅಲ್ಲಮಪ್ರಭು ಕೊಳಕಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿಗೆ ಇಂತಹ ಪ್ರಾಯೋಗಿಕ ಕಾರ್ಯಾಗಾರಗಳು ಸಹಕಾರಿಯಾಗುತ್ತವೆ ಎಂದು ಹೇಳಿದರು.

ಪ್ರೊ. ಗುರುನಾಥ ಮೆವುಂಡಿ ಸ್ವಾಗತಿಸಿದರು. ಕು. ನಸುರುದ್ದೀನ್ ನಿರೂಪಿಸಿ ವಂದಿಸಿದರು. ಪ್ರೊ. ಶ್ರೀಪಾದರಾಜ ಇನಾಂದಾರ್, ಡಾ. ಅನಂತ ಜೋಶಿ, ಪ್ರೊ. ಗುರುನಾಥ ಮೇವುಂಡಿ ಹಾಗೂ ಪ್ರೋ. ಸುಬ್ರಮಣ್ಯ ಹೆಗಡೆ ಕಾರ್ಯಕ್ರಮ ಸಂಯೋಜಿಸಿದ್ದರು. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ , ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗ ಹಾಗೂ ವಿಜಯಲಕ್ಷ್ಮೀ ಗೇರ್ಸ್ ಸಂಯುಕ್ತ ಆಶ್ರಯದಲ್ಲಿ ನಡೆದ ಈ ಪ್ರಾಯೋಗಿಕ ಕಾರ್ಯಾಗಾರದಲ್ಲಿ ನೂರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು ಎಂದು ಪ್ರಾಚಾರ್ಯ ಡಾ. ವಿ.ಎ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


Powered by: erelego.com

## ಹುಬ್ಬಳ್ಳಿಯ ವಿಜಯಲಕ್ಷ್ಮೀ ಗೇರ್ಸ್ ಸಂಸ್ಥೆಯ ಪ್ರತಿನಿಧಿ ಸತೀಶ ಹೇಳಿಕೆ

# ಕೌಶಲಾಭಿವೃದ್ಧಿಗೆ ಕಾಲೇಜಿನಿಂದ ವೇದಿಕೆ

**ಹಳಿಯಾಳ:** ಕೈಗಾರಿಕಾ ಕ್ಷೇತ್ರ ಬಯಸುವ ಕೌಶಲಗಳನ್ನು ವಿದ್ಯಾರ್ಥಿಗಳು ಹೊಂದುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಹಳಿಯಾಳದ ಕೆಎಲ್ಎಸ್‌ವಿಡಿಐಟಿ ಮಹಾವಿದ್ಯಾಲಯವು ವಿದ್ಯಾರ್ಥಿಗಳ ಕೌಶಲಾಭಿವೃದ್ಧಿಗೆ ವೇದಿಕೆ ಕಲ್ಪಿಸಿಕೊಡುತ್ತಿದೆ. ಇದರ ಸದುಪಯೋಗ ಪಡೆದು ಜೀವನದಲ್ಲಿ ಯಶಸ್ಸು ಕಾಣಬೇಕು ಎಂದು ಹುಬ್ಬಳ್ಳಿಯ ವಿಜಯಲಕ್ಷ್ಮೀ ಗೇರ್ಸ್ ಸಂಸ್ಥೆಯ ಪ್ರತಿನಿಧಿ ಸತೀಶ ಹೇಳಿದರು.

ಪಟ್ಟಣದ ವಿಡಿಐಟಿ ಮಹಾವಿದ್ಯಾಲಯದಲ್ಲಿ ಶುಕ್ರವಾರ ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್ಸ್ ಹಾಗೂ ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳ ಕೌಶಲ ಅಭಿವೃದ್ಧಿಗೆ ಆಯೋಜಿಸಿದ್ದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಿಎನ್‌ಸಿ ಮಷಿನ್ ಕಾರ್ಯವೈಖರಿ ಹಾಗೂ ಬಳಸುವ ಕೌಶಲದ ಕುರಿತು ವಿದ್ಯಾರ್ಥಿಗಳಿಗೆ ವಿವರಿಸಿದರು. ವಿಜಯಲಕ್ಷ್ಮೀ ಗೇರ್ಸ್‌ನ ಅಜಿತ ದಾನಿ, ಎಸ್.ಬಿ. ಚೌಹಾಣ್ ಅವರು ಜನರೇಟರ್, ಮೋಟರ್ ವೈಂಡಿಂಗ್ ಹಾಗೂ ರಿವೈಂಡಿಂಗ್ ಕುರಿತು ಮಾಹಿತಿ ನೀಡಿದರು. ಜನರೇಟರ್‌ನಲ್ಲಿನ ಲೋಪದೋಷಗಳನ್ನು ಪತ್ತೆ ಮಾಡುವ ಪರೀಕ್ಷೆಗಳನ್ನು ಪ್ರಾಯೋಗಿಕವಾಗಿ ಪ್ರದರ್ಶಿಸಿದರು.

ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಅಲ್ಲಮಪ್ರಭು ಕೊಳಕಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳ ಕೌಶಲಾಭಿವೃದ್ಧಿಗೆ ಇಂತಹ ಪ್ರಾಯೋಗಿಕ ಕಾರ್ಯಾಗಾರಗಳು ಸಹಕಾರಿಯಾಗುತ್ತವೆ ಎಂದರು.

ಪ್ರೊ. ಶ್ರೀಪಾದರಾಜ ಇನಾಂದಾರ್, ಡಾ. ಅನಂತ ಜೋಶಿ, ಪ್ರೊ. ಗುರುನಾಥ ಮೇವುಂಡಿ, ಪ್ರೊ. ಸುಬ್ರಹ್ಮಣ್ಯ ಹೆಗಡೆ ಕಾರ್ಯಕ್ರಮ ಸಂಯೋಜಿಸಿದ್ದರು. ಪ್ರೊ. ಗುರುನಾಥ ಮೇವುಂಡಿ ಸ್ವಾಗತಿಸಿದರು. ನಸುರುದ್ದೀನ್ ನಿರ್ವಹಿಸಿದರು. ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ , ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗ ಹಾಗೂ ವಿಜಯಲಕ್ಷ್ಮೀ ಗೇರ್ಸ್ ಆಶ್ರಯದಲ್ಲಿ ನಡೆದ ಕಾರ್ಯಾಗಾರದಲ್ಲಿ ನೂರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.